ಊರಿನ ನಡುವೆ ಹರಿಯುತ್ತಿದ್ದ ಹೆಸರಿಲ್ಲದ ನದಿ ಆ ಊರನ್ನು ಇಬ್ಭಾಗ ಮಾಡಿತ್ತು. ಅಂಚೆ ಕಚೇರಿ ಒಂದೇ. ಹೊಸತಾಗಿ ಕೊಡಲ್ಪಟ್ಟ ಪಿನ್ ಕೋಡ್ ಸಂಖ್ಯೆ ಒಂದೇ. ಊರನ್ನು ಸುತ್ತುವ ಅಂಚೆಪೇದೆಯೂ ಒಬ್ಬನೇ. ಎಲ್ಲಾ ಕಾರಣಗಳಿಂದಲೂ ಒಂದಾಗಿರಬೇಕಾಗಿದ್ದ ಊರು ಆ ನದಿಯಿಂದಾಗಿ ಎರಡಾಗಿದ್ದು ಒಂದು ದುರಂತವೂ ಹೌದು. ಅದಕ್ಕಾಗಿ ಆ ನದಿಗೆ ಬೈಯ್ಯಬೇಕೋ ಅಥವಾ ಆ ನದಿಯನ್ನೊಂದು ಹೊಳೆಯಾಗಿಟ್ಟುಕೊಂಡು ತಮ್ಮ ತಮ್ಮನ್ನೇ ಬೇರೆಯಾಗಿಸಿಕೊಂಡ ಆ ಜನರನ್ನು ಬೈಯ್ಯಬೇಕೋ ಅದೂ ಒಂದು ಸಮಸ್ಯೆಯೇ. ಹೆಸರೇ ಇಲ್ಲದ ನದಿ. ಒಂದು ವೇಳೆ ಆ ಊರಿನ ಈಶ್ವರನ ದೇವಸ್ಥಾನದ ಹತ್ತಿರವಾದರೂ ಹರಿಯುತ್ತಿದ್ದಿದ್ದರೆ ಈಶ್ವರೀ ಎಂದಾದರೂ ಇಡಬಹುದಿತ್ತು. ಅಥವಾ ಯಾವುದೇ ಪರ್ವತದಲ್ಲಿ ಹುಟ್ಟಿ ಈ ಊರನ್ನು ಪಾವನಗೊಳಿಸಬೇಕೆಂದು ಈ ಊರಿಗೆ ಹರಿದು ಬಂದಿದ್ದರೆ ಪಾರ್ವತಿ ಎಂದಾದರೂ ಕರೆಯಬಹುದಿತ್ತು. ಆದರೆ ಅದ್ಯಾವುದೂ ಆಗದೆ ತನ್ನದೇ ಆದ ಹೆಸರಿಲ್ಲದಂತೆ ಆದದ್ದು ಆ ನದಿಯ ದುರಂತ.

ಅಸಲಿ ವಿಷಯವೆಂದರೆ ಹಾಗೆ ಒಂದು ಕಡೆ ಹುಟ್ಟಿ ಇನ್ನೊಂದು ಕಡೆಗೆ ಹರಿಯಲು ಅದೊಂದು ನದಿಯೇ ಅಲ್ಲ. ಪಕ್ಕದಲ್ಲಿಯೇ ಇದ್ದ ಅರಬೀ ಸಮುದ್ರದ ನೀರು ದಡದೊಳಗೆ ಹೊಕ್ಕು ಸೃಷ್ಟಿಯಾದ ಹಿನ್ನೀರ ಹೊಳೆ. ದಿನಕ್ಕೆರಡು ಬಾರಿ ಚಂದ್ರ ಹುಟ್ಟುವ ಮತ್ತು ಮುಳುಗುವ ಹೊತ್ತಿಗೆ ಉಕ್ಕೇರುವ ಸಮುದ್ರವನ್ನು ಅನುಸರಿಸಿ ತುಂಬುವ ಮತ್ತು ಖಾಲಿಯಾಗುವ ಉಪ್ಪುನೀರಿನ ದೊಡ್ಡ ತೋಡೇ ಎನ್ನಬಹುದಾದಂತಹುದು. ಅದರಿಂದ ಊರಿಗೆ ಉಪಕಾರ ಸೊನ್ನೆ. ಒಮ್ಮೆ ಸರಕಾರದ ಹದ್ದಿನ ಕಣ್ಣಿಗೆ ಬಿದ್ದ ಆ ಹೊಳೆಯಲ್ಲಿ ಜಲ ಪ್ರಯಾಣದ ಸಾಧ್ಯತೆಯ ಕುರಿತು ಒಂದು ದೊಡ್ಡ ಸರ್ವೆಯೇ ನಡೆದಿತ್ತು. ಆದರೆ ಆ ಸರ್ವೆಯ ಫಲಿತಾಂಶ ಮಾತ್ರ ಅಷ್ಟೇ ವೇಗದಲ್ಲಿ ತಳ ಕಂಡಿತ್ತು ಎನ್ನುವುದನ್ನು ಬಿಟ್ಟರೆ ಆ ಹೊಳೆಯಿಂದ ಉಪಕಾರ ಪಡೆಯುವ ಯಾವ ಅವಕಾಶ ಅಥವಾ ಉದ್ದೇಶ ಯಾರಿಗೂ ಇರಲಿಲ್ಲ. ಅಪಕಾರ ಮಾತ್ರ ಬಹಳ. ಮಳೆಗಾಲ ಬಂತೆಂದರೆ ದಿನಕ್ಕೆರಡು ಬಾರಿ ನದಿ ದಾಟಿ ಪೇಟೆಗೆ ಸಾಮಾನು ತರಲು ಹೋಗುತ್ತಿದ್ದ ಮಂದಿಯೆಲ್ಲ ತಮ್ಮ ತಮ್ಮ ಮನೆಯೊಳಗೇ ಬಂದಿಗಳು. ಸಮುದ್ರದಿಂದ ಉಕ್ಕಿ ಹರಿಯುವ ನೀರು ಬಂದು ಹೊಳೆ ಸೊಕ್ಕುವಂತೆ ಮಾಡಿದಾಗ ಹೊಳೆ ದಾಟುವುದಿರಲಿ ಅದರ ಹತ್ತಿರ ಹೋಗಲೂ ಜನ ಹೆದರುತ್ತಿದ್ದರು. ಅದರ ಸೆಳವಿಗೆ ಎಲ್ಲಿಯಾದರೂ ಸಿಕ್ಕಿದರೆ ಮತ್ತೆ ಹೆಣ ಸಿಗಬೇಕಾದರೂ ಸಮುದ್ರದ ದಂಡೆಯಲ್ಲಿ ನಾಲ್ಕಾರು ದಿನ ಕಾದ ನಂತರವೇ.

ಅಂತಹ ಊರಿನ ಅದೇ ಹೊಳೆಯ ಬದಿಯಲ್ಲಿಯೇ ಕಾರಂತರ ತೆಂಗಿನ ತೋಟ ತನ್ನ ಮೂಲ ಆಕಾರವನ್ನು ಕಳೆದುಕೊಂಡು ಅಷ್ಟಾವಕ್ರ ದಂಡೆಯೊಂದಿಗೆ ಹತ್ತಾರು ತೆಂಗಿನ ಮರಗಳನ್ನು ಹೊಳೆಗೆ ದಾನ ಮಾಡಿ ಯಜಮಾನನ ನಿರ್ಲಕ್ಷ್ಯವನ್ನು ಎತ್ತಿ ತೋರಿಸುತ್ತ ಇದ್ದದ್ದು. ಕಾರಂತರ ಯಕ್ಷಗಾನದ ಹುಚ್ಚು ಅವರನ್ನು ಈ ತೋಟದ ಜವಾಬ್ದಾರಿ ನೋಡಿಕೊಳ್ಳಲು ಬಿಡುವುದಿಲ್ಲ. ವರ್ಷಕ್ಕೆ ಮುನ್ನೂರ ಮೂವತ್ತು ದಿನಗಳನ್ನು ಊರು ಸುತ್ತುವುದರಲ್ಲಿಯೇ ಕಳೆಯುತ್ತಿದ್ದ ಅವರು ಉಳಿದ ದಿನಗಳಲ್ಲೂ ಮನೆಯ ಚಾವಡಿಯ ಕಂಬಕ್ಕೆ ಒರಗಿಕೊಂಡು ಪಕ್ಕದಲ್ಲಿಟ್ಟುಕೊಂಡ ಅವರೇ ತಿರುಗಾಟಕ್ಕೆ ಹೋದಾಗ ಬೇಡಿ ತಂದು ತುಂಬಿಸಿದ ಪೆಟ್ಟಿಗೆಯಿಂದ ಆಗಾಗ್ಗೆ ಮುಷ್ಟಿ ತುಂಬ ಹೊಗೆ ಸೊಪ್ಪು ಮತ್ತು ಎಲೆಗಳನ್ನು ಎಳೆದು ಬಾಯಿ ತುಂಬ ತುಂಬಿಕೊಂಡು ತುಟಿಗೆರಡು ಬೆರಳನ್ನಿಟ್ಟುಕೊಂಡು ಪಿಚಕಾರಿಯಂತೆ ಕೆಂಪು ಜೊಲ್ಲನ್ನು ಹಾರಿಸುತ್ತ ಕುಳಿತರೆ ಅವರ ಕೆಲಸ ಮುಗಿದಂತೆ. ಮನೆಯ ಅಂಗಳದ ತುಂಬಾ ಅವರು ಬರೆದ ಬಣ್ಣದ ಚಿತ್ತಾರವನ್ನು ತೊಳೆದು ತೆಗೆಯುವುದು ಮತ್ತು ಉಳಿದ ತೆಂಗಿನ ಮರಗಳು ಹೊಳೆಯ ಪಾಲಾಗದಂತೆ ಕಾಯ್ದುಕೊಳ್ಳುವುದು ಅವರ ಹೆಂಡತಿಯ ಕೆಲಸ.